ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1138
2)	ಸದಸ್ಯರ ಹೆಸರು	ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	22-09-2021
4)	ಉತ್ತರಿಸಬೇಕಾದ ಸಚಿವರು	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಮಂಜೂರಾಗಿರುವ ಹುದ್ದೆ, ಭರ್ತಿಯಾದ ಹುದ್ದೆ ಹಾಗೂ ಖಾಲಿಯಿರುವ ಹುದ್ದೆಗಳ ವಿವರ ನೀಡುವುದು;	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಒಟ್ಟು 262 ಮಂಜೂರಾದ ಹುದ್ದೆಗಳಿವೆ. ಅದರಲ್ಲಿ 79 ಮಂದಿ ನೌಕರರು ಕರ್ತವ್ಯನಿರ್ವಹಿಸುತ್ತಿದ್ದು, ಒಟ್ಟು 183 ಹುದ್ದೆಗಳು ಖಾಲಿ ಇರುತ್ತವೆ. ನಿಗಮದಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ನಿಗಮ ದಿಂದ ಇಲ್ಲಿಯವರೆಗೂ ಯಾವ ಯಾವ ಸ್ಥಳಗಳಲ್ಲಿ ಹೋಟೆಲ್ /ಅಂಗಡಿಗಳನ್ನು ತೆರೆಯಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು); ಅಲ್ಲಿಂದ ನಿಗಮಕ್ಕೆ ಆಗುತ್ತಿರುವ ಖರ್ಚು-ವೆಚ್ಚ, ಆದಾಯದ ವಿವರ ಒದಗಿಸುವುದು;	ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಿಗಮದ ವತಿಯಿಂದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ದಿನಾಂಕ: 27-10-2018 ರಿಂದ ಮೀನು ಮಾರಾಟ ಮಳಿಗೆ ಮತ್ತು ಉಪಹಾರ ಗೃಹದ ಮಳಿಗೆ ಮತ್ತು ಬೆಂಗಳೂರು ನಗರ ಜಿಲ್ಲೆಯ ರಾಮಮೂರ್ತಿ ನಗರದಲ್ಲಿ ದಿನಾಂಕ: 15-01-2021 ರಿಂದ ಮೀನು ಮಾರಾಟ ಮಳಿಗೆ ಮತ್ತು ಉಪಹಾರ ಗೃಹ ಮಳಿಗೆ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 15-01-2019 ರಿಂದ ಮೀನು ಮಾರಾಟ ಮಳಿಗೆ ಮತ್ತು ಉಪಹಾರ ಗೃಹ ಮಳಿಗೆಗಳ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸಿ ಮಳಿಗೆಗಳನ್ನು ನಡೆಸಲಾಗುತ್ತಿದೆ. ನಿಗಮದ ಮುಳಬಾಗಿಲು ಮೀನು ಮಾರಾಟ ಮಳಿಗೆ ಮತ್ತು ಮೀನು ಉಪಹಾರ ಗೃಹದ ಮಳಿಗೆಯ ಖರ್ಚು-ವೆಚ್ಚ ಮತ್ತು ಆದಾಯದ ವಿವರ ಈ ಕೆಳಗಿನಂತಿದೆ:-

(ರೂ.ಗಳಲ್ಲಿ)

ವರ್ಷ	ಆದಾಯ	ಖರ್ಚು-ವೆಚ್ಚ	ಲಾಭ-ನಷ್ಟ
2018-19	3,72,752.10	4,58,757.76	-92,037.26
2019-20	ಪಂಚಾಯತಿ ವತಿಯಿಂದ ಕೈಗೊಳ್ಳಲಾದ ರಸ್ತೆ ಕಾಮಗಾರಿ ಮತ್ತು ನೀರಿನ ಅಭಾವ ಹಾಗೂ ಕೋವಿಡ್-19 ರ ಹಿನ್ನಲೆಯಲ್ಲಿ ಮಳಿಗೆಯ ಕಾರ್ಯ ಚಟುವಟಿಕೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.		
2020-21	11,58,448.26	9,60,003.63	1,98,444.63
2021-22	4,20,363.00	3,26,206.50	94,156.50

-2-

ನಿಗಮದ ವತಿಯಿಂದ ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ಸ್ಯದರ್ಶಿನಿ ಮೀನು ಮಾರಾಟ ಮಳಿಗೆ ಮತ್ತು ಮೀನು ಉಪಹಾರ ಗೃಹದ ಮಳಿಗೆಯ ಖರ್ಚು-ವೆಚ್ಚ ಮತ್ತು ಆದಾಯದ ವಿವರ ಈ ಕೆಳಗಿನಂತಿದೆ:-

(ರೂ.ಗಳಲ್ಲಿ)

ವರ್ಷ	ಸಂಗ್ರಹ	ಖರ್ಚು	ಲಾಭ-ನಷ್ಟ
2018-19	77,500.00	49,850.00	27,650.00
2019-20	3,81,300.00	11,96,40.00	261660.00
2020-21	4,19,430.00	1,19,640.00	299790.00

ನಿಗಮದ ರಾಮಮೂರ್ತಿನಗರದಲ್ಲಿನ ಮೀನು ಮಾರಾಟ ಮಳಿಗೆ ಮತ್ತು ಮೀನು ಉಪಹಾರ ಗೃಹದ ಮಳಿಗೆಯ ಲಾಭ-ನಷ್ಟದ ವಿವರ ಈ ಕೆಳಗಿನಂತಿರುತ್ತದೆ:-

(ರೂ.ಗಳಲ್ಲಿ)

ವರ್ಷ	ಸಂಗ್ರಹ	ಖರ್ಚು	ಲಾಭ-ನಷ್ಟ
2020-21	3,08,947.44	3,13,238.10	-4,290.66
2021-22	47,576.00	1,33,701.12	-86,125.12

ಇ)	ಹೋಟೆಲ್/ಅಂಗಡಿಗಳಲ್ಲಿ ಗ್ರಾಹಕರು ಬಿಲ್ಲು ಪಾವತಿಸಲು ಡಿಜಿಟಲೀಕರಣ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಲ್ಲಿಯವರೆವಿಗೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು;	ಹೋಟೆಲ್/ ಅಂಗಡಿಗಳಲ್ಲಿ ಗ್ರಾಹಕರು ಬಿಲ್ಲು ಪಾವತಿಸಲು ಡಿಜಿಟಲೀಕರಣ ವ್ಯವಸ್ಥೆ ಮಾಡಲಾಗಿದೆ.
ಈ)	ನಿಗಮದಲ್ಲಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಅಧಿಕಾರಿ/ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳ ವರ್ಗಾವಣೆಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; ಯಾವ ಮಾನದಂಡದ ಆಧಾರದ ಮೇಲೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)	ನಿಗಮದಲ್ಲಿ ಮಂಜೂರಾದ 262 ಹುದ್ದೆಗಳಲ್ಲಿ 79 ಮಂದಿ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ 21 ಮಂದಿ ನೌಕರರು ನಿಯೋಜನೆ ಮೇರೆಗೆ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿ., ಬೆಂಗಳೂರು ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಗಮದಲ್ಲಿ 58 ಮಂದಿ ನೌಕರರು ಮಾತ್ರ ಕರ್ತವ್ಯನಿರ್ವಹಿಸುತ್ತಿದ್ದಾರೆ. ಅಧಿಕಾರಿ/ನೌಕರರನ್ನು ನಿಗಮದ ಅವಶ್ಯಕತೆ ಮತ್ತು ಅಗತ್ಯತೆ ಆಧಾರದಲ್ಲಿ ಕರ್ನಾಟಕ ಸರ್ಕಾರದ ವರ್ಗಾವಣೆ ಮಾರ್ಗಸೂಚಿಗಳನ್ವಯ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಪಸಂಮೀ ಇ-266 ಮೀಇಯೋ 2021

(ಎಸ್. ...)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ [illegible] ರವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1138ರ

ಅನುಬಂಧ

ವಿವರ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
ವೃಂದ -ಎ	7	3	4
ವೃಂದ-ಬಿ	16	7	9
ವೃಂದ-ಸಿ	198	50	148
ವೃಂದ -ಡಿ	41	19	22
ಒಟ್ಟು	262	79	183